# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ: ತುವಿ:ಶೈ.ವಿ:ಬಿ.ಇಡಿ.2025–26/2000 ದಿನಾಂಕ: 22.09.2025

## ಕಚೇರಿ ಟಿಪ್ಪಣಿ

ವಿಷಯ:–2025–26ನೇ ಸಾಲಿನಿಂದ ಬಿ.ಇಡಿ. ಪ್ರಥಮ ಮತ್ತು ದ್ವಿತೀಯ ವರ್ಷದ ಪ್ರವೇಶಾತಿ ಪಡೆಯುವ ಪ್ರತಿ ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕವನ್ನು ಆನ್ ಲೈನ್ ಮುಖಾಂತರವೇ ಪಾವತಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:20.09.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025–26 ನೇ ಸಾಲಿನಿಂದ ಬಿ.ಇಡಿ. ಪ್ರಥಮ ಮತ್ತು ದ್ವಿತಿಯ ವರ್ಷಕ್ಕೆ ಪ್ರವೇಶಾತಿ ಪಡೆಯುವ ಪ್ರತಿ ವಿದ್ಯಾರ್ಥಿಯು ಪ್ರವೇಶಾತಿ ಶುಲ್ಕವನ್ನು ಎಸ್.ಬಿ.ಐ ಖಾತೆ ಹೊಂದಿರುವ ಕಾಲೇಜುಗಳ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಎಸ್.ಬಿ.ಕಲೆಕ್ಟ್ ಮುಖಾಂತರ ಪಾವತಿಸಿಕೊಳ್ಳತಕ್ಕದ್ದು, ಉಳಿದಂತೆ ಇತರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿರುವ ಕಾಲೇಜುಗಳ ಪ್ರಾಂಶುಪಾಲರು ಕಡ್ಡಾಯವಾಗಿ ಆರ್‌ಟಿಜಿಎಸ್/ನೆಫ್ಟ್/ಆನ್‌ಲೈನ್‌ಪೇಮೆಂಟ್/ನೇರವಾಗಿ ಬ್ಯಾಂಕ್‌ನಲ್ಲಿ ಸಂದಾಯ ಮಾಡುವ ಮುಖಾಂತರವೇ ಪಾವತಿಸಿಕೊಳ್ಳತಕ್ಕದ್ದು. ಈ ಸಂಬಂಧ ಎಲ್ಲಾ ಬಿ.ಇಡಿ ಕಾಲೇಜಿನ ಪ್ರಾಂಶುಪಾಲರು ಅಗತ್ಯ ಕ್ರಮವಹಿಸುವುದು.

ಪ್ರವೇಶಾತಿ ಶುಲ್ಕವನ್ನು ಮೇಲೆ ತಿಳಿಸಿರುವ ರೀತಿಯಲ್ಲಿ ಹೊರತು ಪಡಿಸಿ ಕಾಲೇಜಿನ ರಶೀದಿ ಬಳಸಿ ಅಥವಾ ಇನ್ನಾವುದೇ ರೀತಿ ಶುಲ್ಕ ಪಾವತಿಸಿದಲ್ಲಿ ಅಂತಹ ಶುಲ್ಕಗಳನ್ನು ವಿಶ್ವವಿದ್ಯಾನಿಲಯವು ಪರಿಗಣಿಸುವುದಿಲ್ಲ ಇದರಿಂದ ವಿದ್ಯಾರ್ಥಿಗಳಿಗೆ ಆಗುವ ಪ್ರವೇಶಾತಿ ತೊಂದರೆಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರೇ ನೇರ ಜವಾಬ್ದಾರರು ಎಂದು ತಿಳಿಸಲಾಗಿದೆ.

ಪ್ರವೇಶಾತಿ ಪಕ್ರಿಯೆ ಮುಗಿದ ನಂತರ ಮಾಹಿತಿಯನ್ನು ಎಂದಿನಂತೆ ಸಂಬಂಧಪಟ್ಟ ನಮೂನೆಗಳೊಂದಿಗೆ ಭರ್ತಿಮಾಡಿ ಪ್ರತಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ ಚಲನ್‌ಗಳನ್ನು ಮತ್ತು ಈಗಾಗಲೇ ಹಿಂದಿನ ಸಾಲಿನಲ್ಲಿ ನೀಡಲಾದ ಎಲ್ಲಾ (10) ನಮೂನೆಗಳನ್ನು ಭರ್ತಿಮಾಡಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ನಿಗಧಿ ಪಡಿಸುವ ದಿನಾಂಕದ ಒಳಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ವಿ.ಸೂ: ಎಲ್ಲಾ (10) ನಮೂನೆಗಳನ್ನು ಎಕ್ಸೆಲ್‌ನಲ್ಲಿ ದಾಖಲಿಸಿ ವಿವರವನ್ನು ಶೈಕ್ಷಣಿಕ ವಿಭಾಗದ dracademictut@gmail.com ಇ–ಮೇಲ್ ವಿಳಾಸಕ್ಕೆ ಕಡ್ಡಾಯವಾಗಿ ಕಳುಹಿಸಲು ತಿಳಿಸಲಾಗಿದೆ.

ಸಹಿ/- 22.09.2025

ಕುಲಸಚಿವರು

ಕುಲಸಚಿವರು

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಗೆ,

**ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಬಿ.ಇಡಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ,ತುಮಕೂರು.**

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಯವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಿಗೆ ಇ–ಮೇಲ್ ಕಳುಹಿಸುವುದು ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
3. ಕಚೇರಿ ಪ್ರತಿ.